ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 5, MAR-APR 2022, Pp. 87-90.
©*IIMRD*, Mysuru

IIMRD JOURNALS
www.iimrd.com

# ಭಾವನಾಧಾರಿತ ಜಾನಪದ ಸಂಗೀತ: ಒಂದು ಅಧ್ಯಯನ

**ಡಾ. ದುಷ್ಯಂತ ರಾಜ***

*ಪ್ಲಾಟ್ ನಂ.2, ಗಾಂಧಾರ, ಸೇಡಂ–ಶಹಬಾದ್ ರಿಂಗ್ ರೋಡ್, ಪ್ರಶಾಂತ ನಗರ (ಬಿ), ಕಲಬುರ್ಗಿ.

**ಸಾರಾಂಶ: (Abstract)**

*ಜಾನಪದ ಗೀತೆಗಳು ಮೌಖಿಕ ಪರಂಪರೆಯಿಂದ ಬಂದವುಗಳಾಗಿದ್ದರೂ ಕೂಡ ಕೆಲವು ಗೀತೆಗಳು ಜಾನಪದ ಶಾಸ್ತ್ರೀಯ ಸಂಗೀತವನ್ನು ಆಧರಿಸಿ ಸೃಷ್ಟಿಯಾದಂತೆ ತೋರುತ್ತದೆ. ಇಂಥ ನಮೂನೆಯು ಶಾಸ್ತ್ರೀಯ ಸಂಗೀತದ ರಾಗ, ಆರೋಹಣ–ಅವರೋಹಣ ಕ್ರಮಗಳಲ್ಲಿ ಬರುವ ಸ್ವರಗಳು, ತಾಳಗಳನ್ನು ಹೋಲುತ್ತದೆ. ನಿಖರವಾಗಿ ಹೇಳಬೇಕೆಂದರೆ ಶಾಸ್ತ್ರೀಯ ಸಂಗೀತದ ಚೀಜಗಳಂತೆ ಇಂಥ ಹಾಡುಗಳು ಗೋಚರಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಇಂತಹ ಜಾನಪದ ಗೀತೆಗಳ ಹಿನ್ನಲೆಯನ್ನು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** *ಜಾನಪದ ಗೀತೆ, ಶಾಸ್ತ್ರೀಯ ಸಂಗೀತ, ಭಾವನಾಧಾರಿತ ಸಂಗೀತ.*

## ಪೀಠಿಕೆ

ಭಾವನಾಧಾರಿತ ಸಂಗೀತಕ್ಕೆ ರಾಜಸ್ಥಾನದ 'ಮಾರುಧರ' ಅಥವಾ 'ಮರುಧರ' ಜಾನಪದ ಸಂಗೀತ ಪದ್ಧತಿಯನ್ನು ವಿಶ್ಲೇಷಿಸಬಹುದಾಗಿದೆ. 'ಆಲ್ ಇಂಡಿಯಾ ರೇಡಿಯೋ' ವಿವಿಧ ಭಾರತಿ, ಆಕಾಶವಾಣಿಯ ಸಂಗೀತ ವಿಭಾಗವು 2020 ಜೂನ್ ಮೊದಲ ವಾರದಲ್ಲಿ ಬೆಳಗಿನ 'ಸಂಗೀತ ಸರಿತ' ಎಂಬ ಕಾರ್ಯಕ್ರಮ ಸರಣಿಯಡಿಯಲ್ಲಿ ರಾಜಸ್ಥಾನದ 'ಮರುಧರ' ಜಾನಪದ ಸಂಗೀತ ಪದ್ಧತಿಯಲ್ಲಿ "ಶಾಸ್ತ್ರೀಯ ಸಂಗೀತದ ನೆಲೆಗಳು" ಎಂಬ ಕಾರ್ಯಕ್ರಮ ಸರಣಿಯನ್ನು ಬಿತ್ತರ ಮಾಡಿತು. ಈ ಕಾರ್ಯಕ್ರಮದಲ್ಲಿ ಜಾನಪದ ಸಂಗೀತಗಾರರು, ಶಾಸ್ತ್ರೀಯ ಸಂಗೀತಗಾರರು ಭಾಗವಹಿಸಿದ್ದರು. ಜಾನಪದ ಸಂಗೀತಗಾರರಾದ ಮಹೇಂದ್ರ, ಬನ್ಸಿಲಾಲ್ ಝೋರಿ, ಗಂಗಾ ಕಲಾವಂತ, ಕೊಹಿನೂರ್ ಲಾಂಗಾ ಮತ್ತು ಇತರರು ಹಾಗೂ ಶಾಸ್ತ್ರೀಯ ಸಂಗೀತಗಾರರಾದ ಪ್ರಕಾಶ ಹಾಗೂ ಪಿಟೀಲು ವಾದಕರಾದ ಶ್ರೀಮತಿ ಎನ್. ರಾಜಂ ಮತ್ತು ಇತರರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮುಖ್ಯವಾಗಿ ಈ ಕಾರ್ಯಕ್ರಮದಲ್ಲಿ ರಾಜಸ್ಥಾನದ ಮರುಧರ ಶಾಸ್ತ್ರೀಯ ಸಂಗೀತ ಶೈಲಿಯು ಮತ್ತು ರಚನೆಗಳು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಶೈಲಿ ಹಾಗೂ ರಚನೆಗಳನ್ನು ಹೋಲುವ ವಿಷಯಗಳನ್ನು ಚರ್ಚಿಸಲಾಯಿತು.

'ಅಬ ಘರ ಆವೊ ಛಪ್ಪರ್ ಮೇರೆ ಬಾದಕೆ' ಎನ್ನುವ ಜಾನಪದ ಹಾಡು ತಿಲಕ ಕಾಮೋದ ರಾಗದಲ್ಲಿ ಇರುವುದನ್ನು ಗುರುತಿಸಲಾಯಿತು. ಅದೇ ರೀತಿಯಲ್ಲಿ ಗಂಗಾ ಕಲಾವಂತ ಹಾಡಿದ 'ಶಾಮ ಗಯೋ ಪರದೇಸ' ಎಂಬ ಹಾಡು ದೇಶ್ ರಾಗದಲ್ಲಿ ರಚನೆಯಾಗಿರುವುದನ್ನು ಗುರುತಿಸಲಾಯಿತು.

*Please cite this article as: ಡಾ. ದುಷ್ಯಂತ ರಾಜ.* (2022). ಭಾವನಾಧಾರಿತ ಜಾನಪದ ಸಂಗೀತ: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ. 87–90.*

ಇವರೆಡೂ ಹಾಡುಗಳು ಕೆಹರವಾ ತಾಳದಲ್ಲಿದ್ದು, ಸಾಥಿ ವಾದ್ಯಗಳಾಗಿ ಢೋಲಕ್, ಚಿಮಟಾ, ದಮಡಿ, ಮುಂತಾದ ವಾದ್ಯಗಳನ್ನು ನುಡಿಸಲಾಯಿತು. ಈ ಪದ್ಧತಿಯಲ್ಲಿ ಸಾಮಾನ್ಯವಾಗಿ ಶೃಂಗಾರ ಗೀತೆಗಳು ಮತ್ತು ವಿರಹ ಗೀತೆಗಳು ಕಂಡು ಬರುತ್ತವೆ.

ಹೈದ್ರಾಬಾದ್ ಕರ್ನಾಟಕವು ಸುಮಾರು 600 ವರ್ಷಗಳಿಂದ ಪರಕೀಯರ ಆಳ್ವಿಕೆಗೆ ಒಳಪಟ್ಟಿತ್ತು. ಕಲಬುರಗಿಯ ಬಹಮನಿ ಅರಸರು ಈ ಭಾಗವನ್ನು ಆಳುತ್ತಿದ್ದರು. ನಂತರ ಅವರು ಬೀದರ್‌ನಿಂದ ಆಳ್ವಿಕೆ ನಡೆಸುತ್ತಿದ್ದರು. ಈ ಅರಸರ ಬೇರೆ ಬೇರೆ ಪ್ರಭಾವಗಳು ಸಮಾಜದ ಮೇಲೆ ಉಂಟಾಗುತ್ತಿದ್ದವು. ಬಹಮನಿ ಅರಸರು ಉರ್ದು ಭಾಷಿಕರಾದ ಕಾರಣ ಉರ್ದು ಭಾಷೆಯ ಪರಿಣಾಮ ಸತತವಾಗಿ ಬೀರುತ್ತಿತ್ತು. ಆಗ ಉರ್ದು ಭಾಷೆಯು ಆಡಳಿತದ ಭಾಷೆಯಾಗಿ ನಿಂತಿತ್ತು. ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ ಉರ್ದು ಭಾಷೆಯು ಶಿಕ್ಷಣ ಮಾಧ್ಯಮ ಭಾಷೆಯಾಗಿತ್ತು. ಅನ್ಯ ಭಾಷಿಕರು ಕೂಡ ಸಮಾಜದಲ್ಲಿ ಉರ್ದು ಭಾಷೆಯನ್ನು ಮಾತಾಡುವುದು, ಕಲಿಯುವುದು ಮಾಡುತ್ತಿದ್ದರು. ಈಗಲೂ ಕೂಡ ಎಲ್ಲಾ ಭಾಷೆಗೆ ಸೇರಿದ ಜನರು ಪರಸ್ಪರವಾಗಿ, ಆಪ್ತವಾಗಿ, ಆತ್ಮೀಯವಾಗಿ ಭಾಷಾ ಸಂವಹನ ನಡೆಸಲು ಉರ್ದು ಭಾಷೆಯನ್ನು ಬಳಸುತ್ತಾರೆ. ಬಹಮನಿ ಅರಸರು ಮುಸಲ್ಮಾನ ಧರ್ಮಕ್ಕೆ ಸೇರಿದವರಾಗಿದ್ದರು ಮತ್ತು ಉರ್ದು ಭಾಷಿಕರಾಗಿದ್ದರು. ಇದು ಇಂತಹ ಮೇಲ್ಕಂಡ ಸಂಗತಿಗಳಿಗೆ ಕಾರಣವಾಗಿದೆ.

ಆಳರಸರ ಭಾಷೆ ಉಡುಗೆ-ತೊಡುಗೆ, ರೀತಿ-ನೀತಿಗಳು, ಒಡನಾಟಗಳು ಜನರ ಮೇಲೆ ಪ್ರಭಾವ ಬೀರಿ ಅನುಸರಣೆಗೆ ಒಳಪಡಿಸಬಲ್ಲವಾಗಿದ್ದವು. ಈ ಕಾಲದ ನಂತರ ಹೈದ್ರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ) ಪ್ರದೇಶವು ಹೈದ್ರಾಬಾದಿನ ನಿಜಾಮ್ ಶಾಹಿ ಆಡಳಿತಕ್ಕೆ ಒಳಪಟ್ಟಿತು. ಬಹಮನಿ ಅರಸರ ಕಾಲಾನುಕ್ರಮದ ವಿಧಿ ವಿಧಾನಗಳು ಈ ಅವಧಿಯಲ್ಲಿಯೂ ಮುಂದುವರೆದುಕೊಂಡು ಬಂದವು. ಭಾರತದ ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಪರಕೀಯ ಆಳ್ವಿಕೆಯ ನೋವು ನಲಿವುಗಳನ್ನು, ಋಣಾತ್ಮಕ ಪರಿಣಾಮಗಳನ್ನು, ದುಃಖ ದುಮ್ಮಾನಗಳನ್ನು, ಬಿಕ್ಕಟ್ಟುಗಳನ್ನು ಅನುಭವಿಸುತ್ತಾ ಬಂದಿದೆ. 1948ರಿಂದ ಹೈದ್ರಾಬಾದ್ ಕರ್ನಾಟಕದ ವಿಮೋಚನೆಯ ನಂತರ ಈ ಭಾಗದ ಸನ್ನಿವೇಶಗಳು, ಚಿತ್ರಣಗಳು ಬದಲಾದವು.

ಪರಕೀಯರ ಆಳ್ವಿಕೆಯ ಕಾಲದಲ್ಲಿಯೇ ಈ ಭಾಗದಲ್ಲಿ ತತ್ವಪದಕಾರರ ಪರಂಪರೆ ಆರಂಭವಾಯಿತು. ಇವರು ಸಮಾಜದಲ್ಲಿನ ದುಃಖ ದುಮ್ಮಾನಗಳನ್ನು ಪ್ರಕಟಿಸಲು ಜೀವನ ಸಂಬಂಧಿ ತತ್ವಗಳನ್ನು ಜನರಿಗೆ ತಿಳಿಸಲು, ಆಧ್ಯಾತ್ಮಿಕ ಭಾವಗಳನ್ನು ಸೃಷ್ಟಿಸಲು, ಸಮಾಜದ ಓರೆ-ಕೋರೆಗಳನ್ನು ತಿದ್ದಲು ತತ್ವಪದಗಳನ್ನು ರಚಿಸಿದರು. ತತ್ವಪದಗಳ ರಚನಾ ಮಾದರಿ, ವಿನ್ಯಾಸ, ಛಂದಸ್ಸು, ಭಾವ, ಅರ್ಥ, ಶ್ಲೇಷ್ಯ, ಒಡಪು, ಬೆಡಗು ಮುಂತಾದವುಗಳು ವಿಶೇಷ ರೀತಿಯಾಗಿವೆ. ತತ್ವಪದಗಳು ಒಂದು ರೀತಿಯಲ್ಲಿ ಅನುಭಾವ ಕಾವ್ಯವೂ ಹೌದು. ಇವುಗಳು ಅನಕ್ಷರಸ್ಥರಿಗೆ ತಿಳಿಯಬಲ್ಲವಾಗಿದ್ದವು. ಅವರಿಂದ ಹಾಡ ಬಲ್ಲವಾಗಿದ್ದವು. ಇವುಗಳು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ತಮ್ಮ ನೆಲೆ ಕಂಡುಕೊಂಡಿವೆ. ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸಲು, ಒಂದು ರೀತಿಯ ಜ್ಞಾನ ಪರಂಪರೆಯನ್ನು ಹುಟ್ಟು ಹಾಕಲು, ವಿಶಿಷ್ಟವಾದ ತಿಳುವಳಿಕೆಯನ್ನು ಮೂಡಿಸಲು ತತ್ವಪದಗಳು ಬಹುಮುಖ್ಯ ಪಾತ್ರವಹಿಸುತ್ತವೆ. ತತ್ವ ಪದಕಾರರು ಆಡಳಿತಶಾಹಿಯ ದೌರ್ಜನ್ಯಗಳನ್ನು ಧಿಕ್ಕರಿಸುವವರಾಗಿದ್ದಾರೆ. ಅವರು ಜಾತ್ಯಾತೀತ ನಿಲುವನ್ನು ಇಟ್ಟುಕೊಂಡವರು. ಸುಮಾರು 1100 ಮಂದಿ

ತತ್ವಪದಗಳನ್ನು ರಚಿಸಿರುವ ಬಗ್ಗೆ ಮಾಹಿತಿಗಳು ಸಿಗುತ್ತವೆ. ಕಡಕೋಳದ ಪರಿಸರದಲ್ಲಿ ಅರಳಗುಂಡಿಗೆಯ ಭಾಗಮ್ಮ, ಬಸವಲಿಂಗಮ್ಮ ಗೌಡತಿ, ಖೈನೂರು ಕೃಷ್ಣಪ್ಪ, ಜೀರರ(ಹೂಗಾರ) ರೇವಪ್ಪ, ಕಡ್ಲೆವಾಳ ಸಿದ್ದಪ್ಪ, ಚೆನ್ನೂರ ಜಲಾಲ ಸಾಹೇಬ ಮುಂತಾದ ತತ್ವಪದಕಾರರು ಆಗಿಹೋಗಿದ್ದಾರೆ. ಇಂದಿಗೂ ಕೂಡ ಈ ಭಾಗದಲ್ಲಿ ತತ್ವಪದಗಳನ್ನು ಏಕತಾರಿ ಹಿಡಿದು ಶೃತಿ, ರಾಗ, ಲಯಬದ್ಧವಾಗಿ ಹಾಡುವ ಪ್ರತೀತಿ ಇದೆ.

ತತ್ವಪದಗಳು ಜಾನಪದ ಶೈಲಿಯ ಗೇಯ ಪ್ರಕಾರಗಳಾಗಿರುವುದರಿಂದ ಇಲ್ಲಿ ಜಾನಪದ ಸಂಗೀತವನ್ನು ಅವಲೋಕಿಸಲಾಗಿದೆ. ಒಂದು ಪ್ರದೇಶದ ಜಾನಪದ ಸಂಗೀತವು, ಆ ಪ್ರದೇಶದ ಇತರ ಸಂಗೀತ ಪ್ರಕಾರಗಳ ಮೇಲೆ ಪ್ರಭಾವ ಬೀರುತ್ತಿರುತ್ತದೆ. ಜಾನಪದ ಸಂಗೀತವು ಶಾಸ್ತ್ರೀಯ ಸಂಗೀತ ಮತ್ತು ಇತರ ಸಂಗೀತ ಪ್ರಕಾರಗಳ ಮೂಲ ಸ್ರೋತ ಒಂದೇ ಎಂದು ಒಂದು ವೇಳೆ ಹೇಳಬಹುದಾದರೂ ಕೂಡ ಅದರ ಪ್ರತಿಫಲನವನ್ನು ಸಾದೃಶವಾಗಿ ಕಾಣಬಹುದಾಗಿದೆ. ಜಾನಪದ ಸಂಗೀತ ಮತ್ತು ಇತರ ಸಂಗೀತ ಪ್ರಕಾರಗಳು ಪರಸ್ಪರ ಪರಿಣಾಮ, ಪ್ರಭಾವಗಳಿಗೆ ಒಳಗಾಗಬಹುದಾಗಿದೆ. ಶಾಸ್ತ್ರೀಯ ಸಂಗೀತದ ಚಕ್ಷುಗಳಿಂದ ಜಾನಪದ ಸಂಗೀತ ಮತ್ತು ಇತರೆ ಸಂಗೀತ ಪ್ರಕಾರಗಳನ್ನು ಪರಿಶೀಲಿಸಿದಾಗ ಅಲ್ಲಿ ಶಾಸ್ತ್ರೀಯ ಸಂಗೀತದ ರಾಗ ಮತ್ತು ತಾಳಗಳು ಗುರುತಿಸಲ್ಪಡುತ್ತವೆ.

ಭಾರತದ ಮಧ್ಯಪ್ರದೇಶದ 'ಮಾಲವ' ಪ್ರದೇಶದ ಜಾನಪದ ಸಂಗೀತವು ಒಂದು ಮಾದರಿ ಸಂಗೀತ ಪ್ರಕಾರವಾಗಿದೆ. ಅಲ್ಲಿ ರೂಢಿಯಲ್ಲಿರುವ ಜಾನಪದ ಹಾಡುಗಳು, ಜಾನಪದ ಧಾಟಿಗಳು, ಜಾನಪದ ತಾಳವಾದ್ಯಗಳ ನುಡಿಸಾಣಿಕೆ ಮತ್ತು ತಾಳಗಳು ಒಂದು ಶಿಸ್ತುಬದ್ಧತೆಗೆ, ಉತ್ಕೃಷ್ಟತೆಗೆ ಒಂದು ವೈಜ್ಞಾನಿಕ ರಚನಾಬದ್ಧತೆಗೆ ಒಳಪಟ್ಟಿರುತ್ತವೆ. ಈ ಪ್ರದೇಶದ ಜಾನಪದ ಸಂಗೀತದ ಗಾಯನ ಮತ್ತು ವಾದನ ಶಾಸ್ತ್ರೀಯ ಸಂಗೀತದ ಮೇಲೆ ತನ್ನ ಛಾಯೆಯನ್ನು ಬಿಂಬಿಸುತ್ತಿರುತ್ತದೆ. ಹಿಂದೂಸ್ತಾನಿ ಸಂಗೀತದ ಗಾಯಕ ಪಂ.ಕುಮಾರ ಗಂಧರ್ವರು ಮಾಲವ ಪ್ರದೇಶದಲ್ಲಿ ಈ ತರಹದ ಜಿಜ್ಞಾಸೆಗಳಲ್ಲಿ ತೊಡಗಿ ಅನೇಕ ಪ್ರಯೋಗಗಳನ್ನು ಹಾಗೂ ಅನೇಕ ಅಳವಡಿಕೆಗಳನ್ನು ಪ್ರಯೋಗದಲ್ಲಿ ತಂದಿದ್ದಾರೆ. ಇಂಥ ಪ್ರೇರಣೆಗಳಿಂದ ಅವರು ಅನೇಕ ಜಾನಪದ ಮಟ್ಟುಗಳನ್ನು ತಮ್ಮ ಹಾಡುಗಾರಿಕೆಯಲ್ಲಿ ಪ್ರತಿಬಿಂಬಿಸಿದ್ದಾರೆ. ಆ ಪ್ರದೇಶದ ಅನೇಕ ಮಟ್ಟುಗಳನ್ನು ತಮ್ಮ ವಿಚಕ್ಷಣ ದೃಷ್ಟಿಯಿಂದ ವೀಕ್ಷಿಸಿ ಅನೇಕ ಸಾದೃಶ್ಯಗಳನ್ನು ರೂಪಿಸಿದ್ದಾರೆ. ಅವರು ಸಂತ ಕವಿಗಳಾದ ಸೂರದಾಸ, ಕಬೀರದಾಸ, ತುಳಸಿದಾಸ ಮುಂತಾದವರ ದೋಹಾಗಳನ್ನು, ಭಕ್ತಿಗೀತೆಗಳನ್ನು ಮೂಲ ಶೈಲಿ ಆಕರಗಳಲ್ಲಿಟ್ಟು ಹಾಡಿದ್ದಾರೆ. ಅವರ ಶಾಸ್ತ್ರೀಯ ರಾಗ ಹಾಡುಗಾರಿಕೆಯಲ್ಲೂ ಕೂಡ ಈ ಸಂಗತಿಯ ಅನೇಕ ಸೆಳಹುಗಳು ಕಂಡು ಬರುತ್ತವೆ.

ಪಂಡಿತ ಕುಮಾರ ಗಂಧರ್ವರು 'ಮಾಲವ' ಪ್ರದೇಶದ ಸಂತ ಕವಿಗಳ ಗೀತೆಗಳನ್ನು ಹಾಡುವಾಗ ಸಾಮಾನ್ಯವಾಗಿ ಜಾನಪದ ಧಾಟಿಗಳನ್ನು ಮತ್ತು ಜಾನಪದ ತಾಳಗಳನ್ನು ಉಪಯೋಗಿಸಿದ್ದಾರೆ. ಶಾಸ್ತ್ರೀಯ ಸಂಗೀತದ ದೀಪಚಂದಿ ಹಾಗೂ ಇತರ ಕೆಲವು ತಾಳಗಳು ಜಾನಪದ ಹಾಡುಗಾರಿಕೆಗೆ ಹೆಚ್ಚು ಸೂಕ್ತವಾಗಿ ಕಂಡು ಬರುತ್ತವೆ. ಬೇರೆ ಬೇರೆ ಪ್ರದೇಶಗಳ ಜಾನಪದ ಹಾಡುಗಾರಿಕೆ, ತಾಳಗಳು ಹಾಗೂ ಸ್ವರ ಮತ್ತು ತಾಳವಾದ್ಯಗಳು ಹೋಲಿಕೆಯಲ್ಲಿ ಸಾದೃಶ್ಯವಾಗಿ ಕಂಡುಬರುತ್ತವೆ. ವಿದ್ವಾಂಸರ ಅಭಿಪ್ರಾಯದ ಪ್ರಕಾರ ಜಗತ್ತಿನ ಎಲ್ಲಾ ಜಾನಪದ ಸಂಗೀತ ಪ್ರಕಾರಗಳು ಒಂದನ್ನೊಂದು ಹೋಲುತ್ತವೆ. ಪ್ರಸಿದ್ಧ ಜಾನಪದ ವಿದ್ವಾಂಸ ಡಾ.ಚಂದ್ರಶೇಖರ ಕಂಬಾರರು ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ರಾಜಸ್ತಾನದಲ್ಲಿ ಹಾಡುವ ಮೀರಾಬಾಯಿಯ ಪದ್ಯಗಳು ಮತ್ತು ಅವುಗಳ ಧಾಟಿಗಳು ಜಾನಪದದಂತಿವೆ. ಅವು ಕನ್ನಡದ ತತ್ವಪದಗಳಂತೆಯೂ ಭಾಸವಾಗುತ್ತವೆ. ರಾಜಸ್ಥಾನದಲ್ಲಿ ಮೀರಾಬಾಯಿ ಪದ್ಯಗಳನ್ನು ಹಾಡುವ ಕಲಾವಿದರಿದ್ದಾರೆ. ಅವರು ಈ ಪ್ರಕಾರದ ಮೂಲಧಾಟಿಗಳನ್ನು ಹಾಡುತ್ತ ಬಂದಿದ್ದಾರೆ. ಆದರೆ ಸುಗಮ ಸಂಗೀತಗಾರರು, ಸಿನಿಮಾ ಸಂಗೀತಗಾರರು ಸ್ವರ ಸಂಯೋಜನೆ ಮಾಡುವ ಸಂತರ ಪದ್ಯಗಳ ಧಾಟಿ ಹಾಗೂ ಹಾಡುಗಾರಿಕೆಗಳು ಮೂಲ ಮಾದರಿಗಿಂತ ವಿಭಿನ್ನವಾಗಿವೆ ಅಥವಾ ಅವು ಮೂಲ ಮಾದರಿಗಳಂತೆ ಇಲ್ಲ ಅಥವಾ ಅವುಗಳು ಮೂಲ ಮಾದರಿಗಳ ಉತ್ಕೃಷ್ಟತೆಯೊಂದಿಗೆ ಹೋಲಿಕೆಯಲ್ಲಿ ಹಿಂದೆ ಬೀಳುತ್ತವೆ.

**ಉಪಸಂಹಾರ**

ಒಟ್ಟಾರೆಯಾಗಿ ಮೂಲ ಮಾದರಿಗಳ ಸೊಗಡು, ಸೊಬಗು, ಮಾಧುರ್ಯ, ಪ್ರಯೋಗಗಳು ತುಂಬಾ ಉತ್ತಮವಾಗಿವೆ ಮತ್ತು ಅವುಗಳು ಹಿತಕರವಾಗಿ ಕೇಳಿಸುತ್ತವೆ. ಪ್ರಯೋಗಾತ್ಮಕ ದೃಷ್ಟಿಯಿಂದ ಇವುಗಳನ್ನು ನೋಡಿದರೆ ಅಕಸ್ಮಾತ್ ಇವುಗಳು ಸಹಾಯಕವೆನಿಸಬಹುದು.

**ಪರಾಮರ್ಶನ ಗ್ರಂಥಗಳು**


- ಬಾನಂದೂರು ಕೆಂಪಯ್ಯ. (2008). ಕರ್ನಾಟಕ ದಲಿತ ಜನಪದ ಸಂಗೀತ, ಕಣ್ವ ಪ್ರಕಾಶನ. ಬೆಂಗಳೂರು.
- ರಾಗೌ ಜನಪದ ಸಾಹಿತ್ಯ ರೂಪಗಳು. (1978.) ತನುಮನ ಪ್ರಕಾಶನ, ಮೈಸೂರು.
- ಲಿಯೋಟಾಲ್‌ಸ್ಟಾಯ್. (1978). ಕಲೆ ಎಂದರೇನು? (ಮೂಲ ಇಂಗ್ಲೀಷ್) ಕೃಷ್ಣಕುಮಾರ್ ಸಿ.ಪಿ (ಅನು.) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಸುಕನ್ಯಾ ಪ್ರಭಾಕರ್. (2020). ನಿಜಗುಣ ಸಂಗೀತ, ಕರ್ನಾಟಕ ಗಾನಕಲಾ ಪರಿಷತ್, ಸಂಪದ ಪಬ್ಲಿಕೇಷನ್ಸ್, ಬೆಂಗಳೂರು.
- ಹಂದ್ರಾಳ ಗವಿಸಿದ್ದಪ್ಪ. (2013). ಕನ್ನಡ ಸಾಹಿತ್ಯದಲ್ಲಿ ನಾದ ಮತ್ತು ಲಯದ ನಿರ್ವಚನ. ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ.
- ಹನುಮಣ್ಣ ನಾಯಕ ದೊರೆ. (2008). ರಾಗ ದೀಪಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.